# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-570017
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org


ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2018-19/cys- 153 ದಿನಾಂಕ:22.10.2018

## ಜನ ಸಂಪರ್ಕ ಸಭೆಯ ನಡಾವಳಿ

ದಿನಾಂಕ 25.09.2018 ರಂದು ಹನೂರು ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಹನೂರು ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

ಶ್ರೀಯುತರು: ಪದನಾಮ.

1. ಶ್ರೀ.ಎಂ.ಪ್ರತಾಪ್ : ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮೈಸೂರು
2. ಶ್ರೀಮತಿ.ತಾರ. : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮೈಸೂರು
3. ಶ್ರೀ.ಪ್ರದೀಪ್.ಟಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ ಕಛೇರಿ, ಕೊಳ್ಳೇಗಾಲ
4. ಶ್ರೀ. ಲಿಂಗರಾಜು : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),(ಪ್ರಭಾರ) ಹನೂರು ಉಪವಿಭಾಗ.
5. ಶ್ರೀ.ಬಿ.ರಂಗಸ್ವಾಮಿ : ಸಹಾಯಕ ಇಂಜಿನಿಯರ್(ವಿ), ತಾಂತ್ರಿಕ ಶಾಖೆ, ಹನೂರು ಉಪವಿಭಾಗ
6. ಶ್ರೀ.ಎನ್.ಮಹೇಶ್ : ಪ್ರಭಾರ ಸಹಾಯಕ ಇಂಜಿನಿಯರ್(ವಿ), ಹನೂರು ಶಾಖೆ, ಹನೂರು ಉಪವಿಭಾಗ
7. ಶ್ರೀ.ಟಿ.ಸಂತೋಷ್ : ಕಿರಿಯ ಇಂಜಿನಿಯರ್(ವಿ), ರಾಮಾಪುರ ಶಾಖೆ, ಹನೂರು ಉಪವಿಭಾಗ
8. ಶ್ರೀ.ಆರ್.ಭಾಸ್ಕರ್ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಲೊಕ್ಕನಹಳ್ಳಿ ಶಾಖೆ, ಹನೂರು ಉಪವಿಭಾಗ.
9. ಶ್ರೀ.ಬಿ.ಬಿ.ನಾಗರಾಜು : ಪ್ರಭಾರ ಕಿರಿಯ ಇಂಜಿನಿಯರ್(ವಿ), ಕೌದಳ್ಳಿ ಮಹದೇಶ್ವರ ಬೆಟ್ಟ ಶಾಖೆ, ಹನೂರು ಉಪವಿಭಾಗ.
10. ಶ್ರೀ.ಕೆ.ಎಸ್.ನಾಗಭೂಷಣ : ಪ್ರಭಾರ ಹಿರಿಯ ಸಹಾಯಕ, ಕಂದಾಯ ಶಾಖೆ. ಹನೂರು ಉಪವಿಭಾಗ.

ಶ್ರೀ.ಎಂ.ಪ್ರತಾಪ್, ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ರವರು ಸಭೆಗೆ ಹಾಜರಿದ್ದ ಗ್ರಾಹಕರನ್ನು ಸ್ವಾಗತಿಸಿದರು. ನಂತರ ಗ್ರಾಹಕರು ಸಭೆಯಲ್ಲಿ ಸಲ್ಲಿಸಿದ ಅಹವಾಲುಗಳ ಬಗ್ಗೆ ಈ ಕೆಳಕಂಡಂತೆ ಚರ್ಚಿಸಿ ಸೂಕ್ತ ಮಾಹಿತಿಯನ್ನು ನೀಡಿರುತ್ತಾರೆ.

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ಕರಿಯಪ್ಪ, ಆಧ್ಯಕ್ಷರು, ರೈತ ಸಂಘ, ಚಂಗಡಿ | *ಶಿವರಾಜಶೆಟ್ಟಿ, ಕೌದಳ್ಳಿ, ರವರು 2011 ರಲ್ಲಿ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಇದುವರೆವಿಗೂ ಕೆಲಸವಾಗಿಲ್ಲ ಎಂದು ದೂರು ನೀಡಿರುತ್ತಾರೆ. | *ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ಸಂಬಂಧಪಟ್ಟ ಏಜೆನ್ಸಿಯವರಿಂದ ಕಾಮಗಾರಿಯನ್ನು ನಿರ್ವಹಿಸಿಕೊಡಲು ಶಾಖಾಧಿಕಾರಿಗಳಿಗೆ ನಿರ್ದೇಶಿದರು. |
| 2 | ಪ್ರಭುಸ್ವಾಮಿ, ಮಣಗಳ್ಳಿ, ಮೊ.ಸಂ.9901425389 | *ಪ್ರಭುಸ್ವಾಮಿ, ಮಣಗಳ್ಳಿ, ರವರು ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಕಾರ್ಯಾದೇಶಗೊಂಡಿದ್ದು ಗುತ್ತಿಗೆದಾರರು ಇದುವರೆವಿಗೂ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.ಎಂದು ಸಭಯಲ್ಲಿ ತಿಳಿಸಿದರು. | *ಅಧೀಕ್ಷಕ ಇಂಜಿನಿಯರ್(ವಿ) ರವರುಸಂಬಂಧಪಟ್ಟ ಏಜೆನ್ಸಿಯವರಿಂದ ಕಾಮಗಾರಿಯನ್ನು ನಿರ್ವಹಿಸಿಕೊಡಲು ಶಾಖಾಧಿಕಾರಿಗಳಿಗೆ ನಿರ್ದೇಶಿದರು. |

Scanned by CamScanner

| | | | |
|---|---|---|---|
| 3 | ರಾಜೇಶ್ವರಿ ಕೋಂ ಶಿವಣ್ಣ, ಹಲಗಾಪುರ, ಶಿವಪ್ಪ, ಮೊಸಂ.9482617517, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು | * ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಇದುವರೆವಿಗೂ ಕೆಲಸವಾಗಿಲ್ಲ. ಎಂದು ಸಭೆಯಲ್ಲಿ ತಿಳಿಸಿದರು | * ಅಧೀಕ್ಷಕ ಇಂಜಿನಿಯರ್(ವಿ)ರವರು ಜ್ಯೇಷ್ಠತೆಯ ಆಧಾರದ ಮೇಲೆ ಕಾಮಗಾರಿಯನ್ನು ನಿರ್ವಹಿಸಿಕೊಡಲು ಸಂಬಂದಪಟ್ಟ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |
| 4 | ಎಸ್.ಮಹದೇವಪ್ಪ, ಆರ್.ಎಸ್.ದೊಡ್ಡಿ. | * ತಮ್ಮ ಸ್ಥಾವರ ಸಂಖ್ಯೆ: HL-1111, ರ ಸಂಪರ್ಕದಲ್ಲಿ ಒಂದು ಕಂಬ ಬಿರುಕು ಕಾಣಿಸಿಕೊಂಡಿದ್ದು ಬದಲಾಯಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು HL-1111ರ ಸ್ಥಾವರವು ಹನೂರು ಪಟ್ಟಣ ವ್ಯಾಪ್ತಿಯಲ್ಲಿದ್ದು. ಈಗಾಗಲೇ ಹನೂರಿನಲ್ಲಿ IPDS ಯೋಜನೆಯಡಿಯಲ್ಲಿ ಕಾಮಗಾರಿಯು ನಡೆಯುತ್ತಿದ್ದು, IPDS ಯೋಜನೆಯಡಿಯಲ್ಲಿ ಕಂಬವನ್ನು ಬದಲಾಯಿಸಲು ಸಂಬಂದಪಟ್ಟ ಶಾಖಾಧಿಖಾರಿಗಳಿಗೆ ಸೂಚಿಸಿದರು. |
| 5 | ಚಂದ್ರ, ವೈಶಂಪಾಳ್ಯ, | * ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಕಾರ್ಯಾದೇಶಗೊಂಡಿರುತ್ತದೆ, ಆದರೆ ಇದುವರೆವಿಗೂ ಕೆಲಸವಾಗಿರುವುದಿಲ್ಲ. | *ಸಂಬಂಧಪಟ್ಟ ಏಜೆನ್ಸಿಯವರಿಂದ ಕಾಮಗಾರಿಯನ್ನು ನಿರ್ವಹಿಸಿಕೊಡಲು ಶಾಖಾಧಿಕಾರಿಗಳಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 6 | ತಾಯಮ್ಮ ಕೋಂ ಶಂಭೇಗೌಡ, ಮಾರಿಗುಡಿ ಬೀದಿ, ಹನೂರು. | *100 ಕೆವಿಎ ಐ.ಟಿ.ಐ. ಪರಿವರ್ತಕವನ್ನು ಸ್ಥಳ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. | *ಸ್ಥಳ ಪರಿಶೀಲಿಸಿ ಇಲಾಖಾ ನಿಯಾಮಾನುಸಾರ ಕ್ರಮವಹಿಸಲು ಹನೂರು ಶಾಖಾಧಿಖಾರಿ ರವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 7 | ಪಿ.ಚಿನ್ನಸ್ವಾಮಿ, ಉದ್ದನೂರು | * ತಮ್ಮ ಮನೆಯ ಮೇಲೆ ಹಾದು ಹೋಗಿರುವ ಎಲ್.ಟಿ. ಮಾರ್ಗವನ್ನು ಸ್ಥಳಾಂತರಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಮಾರ್ಗವನ್ನು ಸ್ಥಳಾಂತರಿಸುವ ಕಾಮಗಾರಿಯನ್ನು ಅರ್ಜಿದಾರರೇ ತಮ್ಮ ಸ್ವಂತ ಖರ್ಚಿನಿಂದ ನಿರ್ವಹಿಸಿಕೊಳ್ಳಲು ಅರ್ಜಿದಾರರಿಗೆ ಸವಿವರವಾಗಿ ಮಾಹಿತಿಯನ್ನು ನೀಡಿದರು. |
| 8 | ನಾರಾಯಣನಾಯ್ಡು, ಹನೂರು | *25 ಕೆವಿಎ ಗೋವಿಂದರಾಜು ಪರಿವರ್ತಕಕ್ಕೆ ಹೆಚ್ಚುವರಿಯಾಗಿ 25ಕೆವಿಎ ಪರಿವರ್ತಕ ಅಳವಡಿಸಲು ಅಂದಾಜು ಪಟ್ಟಿ ತಯಾರಿಸಿದ್ದು ಕಾಮಗಾರಿಯಾಗಿರುವುದಿಲ್ಲ. | * ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ವರದಿಯನ್ನು ಉಪ-ವಿಭಾಗ ಹಾಗೂ ವಿಭಾಗ ಕಛೇರಿಗೆ ನೀಡಲು ಅಧೀಕ್ಷಕ ಇಂಜಿನಿಯರ್(ವಿ) ರವರು ತಿಳಿಸಿದರು. |
| 9 | ಜಡೇಸ್ವಾಮಿ, ಶಾಗ್ಯ. | *ಶ್ರೀಮತಿ.ರತ್ನಮ್ಮ ಕೋಂ ಜಡೇಸ್ವಾಮಿ, ಶಾಗ್ಯ, ರವರು 2012 ರಲ್ಲಿ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಇದುವರೆವಿಗೂ ಕಾಮಗಾರಿಯನ್ನು ಮಾಡಿರುವುದಿಲ್ಲ. | *ಸಂಬಂದಪಟ್ಟ ಏಜೆನ್ಸಿಯವರಿಂದ ಕಾಮಗಾರಿಯನ್ನು ನಿರ್ವಹಿಸಿಕೊಡಲು ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 10 | ಚಿಕ್ಕಮಾದನಾಯ್ಕ, ಮಸಿಯಬೋವಿದೊಡ್ಡಿ | *ಅಕ್ರಮ-ಸಕ್ರಮ ಯೋಜನೆಯಲ್ಲಿ 03 ತಿಂಗಳ ಹಿಂದೆ ಪರಿವರ್ತಕವನ್ನು ಅಳವಡಿಸಿದ್ದು 02 ತಿಂಗಳ ಹಿಂದೆಯೇ ಪರಿವರ್ತಕವು ಸುಟ್ಟು ಹೋಗಿದ್ದು ಇದುವರೆವಿಗೂ ಬದಲಾಯಿಸಿರುವುದಿಲ್ಲ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಪರಿವರ್ತಕವು ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಅಳವಡಿಸಲಾಗಿದ್ದು, ಖಾತರಿ ಅವಧಿಯೊಳಗೆ ವಿಫಲಗೊಂಡಿರುವ ಕಾರಣ ಮೆ//ಶ್ರೀ.ನಂಜುಂಡೇಶ್ವರ ಎಲೆಕ್ಟ್ರಿಕಲ್ಸ್ ಮೈಸೂರು ರವರನ್ನು ದೂರವಾಣಿ ಅಥವಾ ಪತ್ರದ ಮೂಲಕ ಸಂಪರ್ಕಿಸಿ ಕೂಡಲೇ ಪರಿವರ್ತಕವನ್ನು ಬದಲಾಯಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| 11 | ನಂಜೇಗೌಡ ಬಿನ್ ಅಂಕೇಗೌಡ, ಉದ್ದನೂರು | *ನಂಜೇಗೌಡ, ಉದ್ದನೂರು, ರವರು ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಅಂದಾಜು ಪಟ್ಟಿಯನ್ನು ಸಹ ತಯಾರಿಸಲಾಗಿದ್ದು ಕಾಮಗಾರಿಯನ್ನು ಇದುವರೆವಿಗೂ ಪೂರ್ಣಗೊಳಿಸಿರುವುದಿಲ್ಲ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಹನೂರಿನಲ್ಲಿ ಈಗಾಗಲೇ UNIP ಕಾಮಗಾರಿಯನ್ನು ನಿರ್ವಹಿಸುತ್ತಿದು ಸಂಬಂದಪಟ್ಟ ಏಜೆನ್ಸಿಯವರಿಂದ ಕಾಮಗಾರಿಯನ್ನು ನಿರ್ವಹಿಸಿಕೊಡಲು ಶಾಖಾಧಿಕಾರಿಗಳಿಗೆ ಸೂಚಿಸಿದರು. |

Scanned by CamScanner

| | | | |
|---|---|---|---|
| 12 | ಗಿರೀಶ್, ಉದ್ದನೂರು, ಮೊ.ಸಂ.8722628038 | *ಗಿರೀಶ್, ಉದ್ದನೂರು, ರವರು ಅಕ್ರಮ-ಸಕ್ರಮ ಯೋಜನೆಯಲ್ಲಿ ಒಂದು ತಿಂಗಳ ಹಿಂದೆ ಪರಿವರ್ತಕವನ್ನು ಅಳವಡಿಸಿದ್ದು ಸುಮಾರು 15 ದಿನಗಳ ಹಿಂದೆಯೇ ವಿಫಲವಾಗಿರುತ್ತದೆ, ಆದರೆ ಇದುವರೆವಿಗೂ ಬದಲಾಯಿಸಿರುವುದಿಲ್ಲ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಪರಿವರ್ತಕವು ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಅಳವಡಿಸಲಾಗಿದ್ದು, ಖಾತರಿ ಅವಧಿಯೊಳಗೆ ವಿಫಲಗೊಂಡಿರುವ ಕಾರಣ ಮೆ//ಶ್ರೀ.ನಂಜುಂಡೇಶ್ವರ ಎಲೆಕ್ಟ್ರಿಕಲ್ಸ್ ಮೈಸೂರು ರವರನ್ನು ದೂರವಾಣಿ ಅಥವಾ ಪತ್ರದ ಮೂಲಕ ಸಂಪರ್ಕಿಸಿ ಕೂಡಲೇ ಪರಿವರ್ತಕವನ್ನು ಬದಲಾಯಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| 13 | ಶಿವಮಲ್ಲಪ್ಪ , ಚಿಂಚಳ್ಳಿ | *ಶಿವಮಲ್ಲಪ್ಪ, ಚಿಂಚಳ್ಳಿ, ರವರು ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಕಾರ್ಯಾದೇಶಗೊಂಡಿದ್ದು ಇದುವರೆವಿಗೂ ಕಾಮಗಾರಿಯಾಗಿರುವುದಿಲ್ಲ, ಹಾಲಿ 100ಕೆವಿಎ ಪರಿವರ್ತಕವು ಅಧಿಕ ಭಾರ ಹೊಂದಿದ್ದು ಪರಿವರ್ತಕವು ಈಗಾಗಲೇ 04 ಬಾರಿ ವಿಫಲಗೊಂಡಿರುತ್ತದೆ ಎಂದು ದೂರಿರುತ್ತಾರೆ. | * ಶೀಘ್ರದಲ್ಲಿ ಸಂಬಂದಪಟ್ಟ ಏಜೆನ್ಸಿಯವರಿಂದ ಕಾಮಗಾರಿಯನ್ನು ನಿರ್ವಹಿಸಿ ಪರಿವರ್ತಕದ ವಿಫಲತೆಯನ್ನು ತಡೆಯಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮತ್ತು ಶಾಖಾಧಿಕಾರಿಗಳಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 14 | ಕರಿಯಪ್ಪ, ಅಧ್ಯಕ್ಷರು, ರೈತ ಸಂಘ, ಚಂಗಡಿ | *ಎಂ.ಎಸ್.ದೊಡ್ಡಿಯ ಕಾಳಮ್ಮನದೊಡ್ಡಿಯಲ್ಲಿ 63ಕೆವಿಎ ಪರಿವರ್ತಕಕ್ಕೆ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು 06 ತಿಂಗಳಿಂದ ಕೇಳಿಕೊಂಡರೂ ಇದುವರೆವಿಗೂ ಕಾಮಗಾರಿಯನ್ನು ಮಾಡಿರುವುದಿಲ್ಲ. | * ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ವರದಿಯನ್ನು ಉಪ-ವಿಭಾಗ ಹಾಗೂ ವಿಭಾಗ ಕಛೇರಿಗೆ ನೀಡುವಂತೆ ನಿರ್ದೇಶಿಸಲಾಯಿತು. |
| 15 | ಕರಿಯಪ್ಪ, ಅಧ್ಯಕ್ಷರು, ರೈತ ಸಂಘ, ಚಂಗಡಿ | *ಚಂಗಡಿ ಗ್ರಾಮಕ್ಕೆ ವಿದ್ಯುತ್ ಮಾರ್ಗಗಳಲ್ಲಿ ಇನ್ಸುಲೇಟರ್‌ಗಳು ದುರಸ್ಥಿಯಾಗಿದ್ದು ಬದಲಾಯಿಸಲು ಕೋರಿರುತ್ತಾರೆ. | * ಗುತ್ತಿಗೆದಾರರಿಗೆ ಈಗಾಗಲೇ ಅವಾರ್ಡ ನೀಡಿದ್ದು ಕಾಮಗಾರಿಯನ್ನು ಶೀಘ್ರದಲ್ಲೇ ನಿರ್ವಹಿಸುವಂತೆ ಸೂಚಿಸಲಾಯಿತು. |
| 16 | ಕರಿಯಪ್ಪ, ಅಧ್ಯಕ್ಷರು, ರೈತ ಸಂಘ, ಚಂಗಡಿ | *ರಂಗಶೆಟ್ಟಿ, ಭದ್ರಯ್ಯನಹಳ್ಳಿ ರವರು 2011 ರಲ್ಲಿ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಕಾರ್ಯಾದೇಶಗೊಂಡಿರುತ್ತದೆ, ಇದುವರೆವಿಗೂ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ಹನೂರಿನಲ್ಲಿ ಈಗಾಲೇ UNIP ಕಾಮಗಾರಿಯನ್ನು ನಿರ್ವಹಿಸುತ್ತಿದ್ದು ಜ್ಯೇಷ್ಟತೆಯ ಆಧಾರದಮೇಲೆ ಕಾಮಗಾರಿಯನ್ನು ನಿರ್ವಹಿಸಿಕೊಡಲಾಗುವುದೆಂದು ಅರ್ಜಿದಾರರಿಗೆ ತಿಳಿಸಿದರು. |

ಮೇಲ್ಕಂಡ ದಿನಾಂಕದಂದು ಜನ ಸಂಪರ್ಕ ಸಭೆಯಲ್ಲಿ ಚರ್ಚಿಸಿದ ವಿಷಯಗಳ ವಿವರಗಳನ್ನು ತಮ್ಮ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕೆ ಸಲ್ಲಿಸಲಾಗಿದೆ.

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಕೊಳ್ಳೇಗಾಲ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಹನೂರು ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.

Scanned by CamScanner